158ನೇ ಮ (168) LHK 070426

## ಕರ್ನಾಟಕ ವಿಧಾನ ಪರಿಷತ್ತು

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ, ಶ್ರೀ ಸಿ.ಟಿ. ರವಿ ಇವರು 72ರ ನಿಯಮದಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಬಗ್ಗೆ.

**ಪ್ರಸ್ತಾವನೆ:**

"ವಿವಿಧ ಇಲಾಖೆಗಳಲ್ಲಿ ಕಾಮಗಾರಿ ನಿರ್ವಹಿಸಿ ಬಾಕಿ ಇರುವ 37,000 ಕೋಟಿ ರೂ. ಬಿಡುಗಡೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಗುತ್ತಿಗೆದಾರರ ಸಂಘದವರು ಪ್ರತಿಭಟನೆ ಮಾಡಿದರು. ಪ್ರಮುಖವಾಗಿ ಬೃಹತ್ ನೀರಾವರಿ ಇಲಾಖೆಯಿಂದ 13,000 ಕೋಟಿ ರೂ, ಲೋಕೋಪಯೋಗಿ ಇಲಾಖೆಯಲ್ಲಿ 9,300 ಕೋಟಿ ರೂ, ಸಣ್ಣ ನೀರಾವರಿ 3,800 ಕೋಟಿ ರೂ. ಕಾರ್ಮಿಕ ಇಲಾಖೆಯ 2,000 ಕೋಟಿ ರೂ, ಪಿಆರ್‌ಇಡಿ ಇಲಾಖೆಯ 3,000 ಕೋಟಿ ರೂ. ಹಾಗೂ ಜಿಬಿಎದಿಂದ 1,600 ಕೋಟಿ ರೂ, ಬಾಕಿ ಇದೆ. ಗುತ್ತಿಗೆದಾರರು ಮತ್ತು ರಾಜಕಾರಣಿಗಳ ನಡುವೆ ಅಧಿಕಾರಿಗಳು ಮಧ್ಯವರ್ತಿಗಳಾಗಿದ್ದಾರೆ. ಕಮಿಷನ್ ಇಷ್ಟಲ್ಲ, ಅಷ್ಟು ಎಂದು ಅವರೇ ನಮಗೆ ಹೇಳುತ್ತಾರೆ. ತಮಗೆ ಬೇಕಾದವರಿಗೆ ಗುತ್ತಿಗೆ ನೀಡುತ್ತಾರೆ. ಅರ್ಹತೆ ಇದ್ದರೂ ಅನರ್ಹಗೊಳಿಸುತ್ತಾರೆ. ಕಮಿಷನ್ ವಿಚಾರ ಮಾತನಾಡಿದರೆ ನಮ್ಮ ಪೇಮೆಂಟ್ ಇನ್ನೂ 1 ವರ್ಷ ವಿಳಂಬ ವಾಗುತ್ತದೆ. ನಮಗೆ ಹಣ ಬಿಡುಗಡೆ ಮಾಡಿದರೆ ಸಾಕು ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಈ ಸಮಸ್ಯೆ ಪರಿಹಾರ ಆಗದಿದ್ದರೆ ಅನಿರ್ದಿಷ್ಟ ಮುಷ್ಕರ ಮಾಡುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಗುತ್ತಿಗೆದಾರರಿಗೆ ಬಾಕಿ ಹಣ ಬಿಡುಗಡೆ ಮಾಡುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ."

**ಮಾನ್ಯ ಮುಖ್ಯಮಂತ್ರಿಗಳ ಉತ್ತರ:**

1. ನಮ್ಮ ಸರ್ಕಾರ ಅಧಿಕಾರವಹಿಸಿದ ದಿನಕ್ಕೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಪ್ರಮುಖ ಇಲಾಖೆಗಳಡಿ ಒಟ್ಟಾರೆ ರೂ.29159.00 ಕೋಟಿ ಮೊತ್ತದ ಬಿಲ್ಲುಗಳು ಬಾಕಿ ಇರುತ್ತವೆ. ಈ ಬಾಕಿ ಬಿಲ್ಲುಗಳ ಮೊತ್ತದಲ್ಲಿ ಈವರೆಗೆ ರೂ.24947.00 ಕೋಟಿ ಮೊತ್ತ ಬಿಲ್ಲುಗಳನ್ನು ಆಯವ್ಯಯದಲ್ಲಿ ಅನುದಾನ ಒದಗಿಸಿ ತೀರುವಳಿ ಮಾಡಲಾಗಿರುತ್ತದೆ ಅಂದರೆ ಶೇ.85.56ರಷ್ಟು ಬಾಕಿ ಬಿಲ್ಲುಗಳನ್ನು ತೀರುವಳಿಗೊಳಿಸಲಾಗಿದೆ. ಹಿಂದಿನ ಸರ್ಕಾರವು ತನ್ನ ಅವಧಿಯಲ್ಲಿ ಬಾಕಿ ಕಾರ್ಯಭಾರವನ್ನು ಪರಿಗಣಿಸದೆ ಹೊಸ ಕಾಮಗಾರಿಗಳನ್ನು ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ಮೀರಿ ಅನುಮೋದನೆ ನೀಡಿ ಗುತ್ತಿಗೆ ನೀಡಲಾಗಿರುವ ಕಾರಣ ಅಧಿಕವಾದ ಬಿಲ್ಲುಗಳು ಸೃಜನೆಯಾಗಿರುತ್ತವೆ. ಹಿಂದಿನ ಸರ್ಕಾರದ ಅವಧಿಯ ಬಿಲ್ಲುಗಳ ಮಾಹಿತಿಯು ಈ ಕೆಳಕಂಡಂತಿದೆ.

## ಪ್ರಮುಖ ಇಲಾಖೆಗಳಡಿ ಹಿಂದಿನ ಸರ್ಕಾರದ ಅವಧಿಯ ಬಿಲ್ಲುಗಳ ತೀರುವಳಿಯ ಮೊತ್ತ

(ರೂ. ಕೋಟಿಗಳಲ್ಲಿ )

| ಕ್ರ.ಸಂ | ಇಲಾಖೆ | ಬಾಕಿ ಬಿಲ್ಲು ಮೊತ್ತ | ಈವರೆಗೆ ತೀರುವಳಿಗೊಳಿಸಿದ ಮೊತ್ತ | ಪ್ರತಿಶತ ತೀರುವಳಿ |
|---|---|---|---|---|
| 01 | ಲೋಕೋಪಯೋಗಿ | 8113 | 7018 | 86.50 |
| 02 | ಜಲಸಂಪನ್ಮೂಲ | 8926 | 6950 | 77.86 |
| 03 | ಸಣ್ಣ ನೀರಾವರಿ | 2005 | 1700 | 84.79 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ | 4580 | 4410 | 96.29 |
| 05 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1677 | 1580 | 94.21 |
| 06 | ನಗರಾಭಿವೃದ್ಧಿ | 3858 | 3289 | 85.25 |
| | **ಒಟ್ಟಾರೆ** | **29159.00** | **24947.00** | **85.56** |

II. ಹಿಂದಿನ ಸರ್ಕಾರದ ಅವಧಿಯಲ್ಲಿ ಬಿಲ್ಲುಗಳ ಜೊತೆ 2023-24 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳಿಗೂ ಸೇರಿ ಸರ್ಕಾರದ ಪ್ರಮುಖ ಇಲಾಖೆಗಳಡಿ ಈವರೆಗೆ ಬಂಡವಾಳ ಲೆಕ್ಕ ಶೀರ್ಷಿಕೆಯಡಿ ರೂ.122186.00 ಕೋಟಿ ವೆಚ್ಚ ಭರಿಸಲಾಗಿದೆ. ಈ ರೀತಿ ಭರಿಸಲಾದ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಇಲಾಖೆ | 2023-24 ರಿಂದ ಇಲ್ಲಿಯವರೆಗೆ ಭರಿಸಲಾದ ವೆಚ್ಚ |
|---|---|---|
| 01 | ಲೋಕೋಪಯೋಗಿ | 22594.00 |
| 02 | ಜಲಸಂಪನ್ಮೂಲ | 41849.00 |
| 03 | ಸಣ್ಣ ನೀರಾವರಿ | 6738.00 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ | 22437.00 |
| 05 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 2045.00 |
| 06 | ನಗರಾಭಿವೃದ್ಧಿ | 26523.00 |
| | **ಒಟ್ಟಾರೆ** | 122186.00 |

III. ಸರ್ಕಾರವು 2023-24 ರಿಂದ ಪ್ರಮುಖ ಇಲಾಖೆಗಳಿಗೆ ಆಯವ್ಯಯದಲ್ಲಿ ಅನುದಾನ ಒದಗಿಸುವುದರ ಜೊತೆ ಪೂರಕ ಅಂದಾಜುಗಳಲ್ಲಿ ಹಾಗು ಉಳಿತಾಯ ಅನುದಾನವನ್ನು ಮರುಹೊಂದಾಣಿಕೆ ಮೂಲಕ ಒದಗಿಸಿ ಬಾಕಿ ಬಿಲ್ಲುಗಳ ತೀರುವಳಿ ಮಾಡಲು ಕ್ರಮವಹಿಸಲಾಗಿದೆ. ಮರುಹೊಂದಾಣಿಕೆ ಮತ್ತು ಪೂರಕ ಅಂದಾಜಿನಲ್ಲಿ ಒದಗಿಸಲಾದ ವಿವರಗಳು ಈ ಕೆಳಕಂಡಂತೆ.

| ಕ್ರ.ಸಂ | ಇಲಾಖೆ | 2023-24ರಿಂದ ಪೂರಕ ಅಂದಾಜು ಮತ್ತು ಮರುಹೊಂದಾಣಿಕೆ ಮೂಲಕ ಒದಗಿಸಿದ ಅನುದಾನ |
|---|---|---|
| 01 | ಲೋಕೋಪಯೋಗಿ | 5907.00 |
| 02 | ಜಲಸಂಪನ್ಮೂಲ | 7499.00 |
| 03 | ಸಣ್ಣ ನೀರಾವರಿ | 1802.00 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ | 5711.00 |
| 05 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 245.00 |
| 06 | ನಗರಾಭಿವೃದ್ಧಿ | 4565.00 |
| | **ಒಟ್ಟಾರೆ** | **25729.00** |

III. ಹಿಂದಿನ ಸರ್ಕಾರದ ಅವಧಿಯಲ್ಲಿ ಬಿಲ್ಲುಗಳ ಜೊತೆ 2023-24 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳಿಗೂ ಸೇರಿ ಸರ್ಕಾರದ ಎಲ್ಲಾ ಇಲಾಖೆಗಳಡಿ ಈವರೆಗೆ ಬಂಡವಾಳ ಲೆಕ್ಕ ಶೀರ್ಷಿಕೆಯಡಿ ರೂ.122186.00 ಕೋಟಿ ವೆಚ್ಚ ಭರಿಸಲಾಗಿದೆ. ಈ ವೆಚ್ಚದಲ್ಲಿ ಪ್ರಮುಖ ಇಲಾಖೆಗಳಡಿ ಬಂಡವಾಳ ಲೆಕ್ಕ ಶೀರ್ಷಿಕೆಗೆ ಕಳೆದ 3 ವರ್ಷಗಳಲ್ಲಿ ಒದಗಿಸಲಾದ ಅನುದಾನ ಹಾಗು ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

IV. ಪ್ರಸ್ತುತ ವಿವಿಧ ಇಲಾಖೆಗಳಡಿ ಪಾವತಿಸಲು ಬಾಕಿ ಇರುವ ಬಿಲ್ಲುಗಳ ವಿವರಗಳು ಮತ್ತು 2026-27 ನೇ ಸಾಲಿಗೆ ಒದಗಿಸಲಾದ ಅನುದಾನ ಈ ಕೆಳಕಂಡಂತಿವೆ.

| ಕ್ರ.ಸಂ | ಇಲಾಖೆ | ಪ್ರಸ್ತುತ ಪಾವತಿಸಲು ಬಾಕಿ ಇರುವ ಬಿಲ್ಲುಗಳು | ಬಂಡವಾಳ ಲೆಕ್ಕ ಶೀರ್ಷಿಕೆಯಡಿ 2026-27 ನೇ ಸಾಲಿಗೆ ಒದಗಿಸಲಾದ ಅನುದಾನ |
|---|---|---|---|
| 01 | ಲೋಕೋಪಯೋಗಿ | 9000.00 | 8645.00 |
| 02 | ಜಲಸಂಪನ್ಮೂಲ | 18772.00 | 18128.00 |
| 03 | ಸಣ್ಣ ನೀರಾವರಿ | 3660.00 | 2938.00 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ | 1653.00 | 13370.00 |
| 05 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 100.00 | 1315.00 |
| 06 | ನಗರಾಭಿವೃದ್ಧಿ | 4690.00 | 10803.00 |
| | ಒಟ್ಟಾರೆ | 37875.00 | 55199.00 |

ಮೇಲ್ಕಂಡಂತೆ ಪ್ರಮುಖ ಇಲಾಖೆಗಳಡಿ ಪ್ರಸ್ತುತ ರೂ.37875.00 ಕೋಟಿ ಮೊತ್ತದ ಬಾಕಿ ಬಿಲ್ಲುಗಳಿದ್ದು, ಇವುಗಳ ತೀರುವಳಿಗೆ ಪ್ರಸ್ತುತ ಪೂರಕ ಅಂದಾಜು-3ರಲ್ಲಿ ಹಾಗೂ ಉಳಿತಾಯ ಅನುದಾನವನ್ನು ಮರುಹೊಂದಾಣಿಕೆ ಮೂಲಕ ಒದಗಿಸಲು ಕ್ರಮವಹಿಸಲಾಗುತ್ತಿದೆ. ಮುಂದಿನ ಸಾಲಿಗೆ ಮುಂದುವರೆಯುವ ಬಾಕಿ ಬಿಲ್ಲುಗಳನ್ನು 2026-27 ನೇ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಕಾಲ ಕಾಲಕ್ಕೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳ ಆಧರಿಸಿ ತೀರುವಳಿ ಮಾಡಲು ಕ್ರಮವಹಿಸಲಾಗುವುದು.

ಹಿಂದಿನ ಸರ್ಕಾರದಿಂದ ಮುಂದುವರೆದ ಬಾಕಿ ಬಿಲ್ಲುಗಳನ್ನು ಪಾವತಿಸುವುದರ ಜೊತೆ ನಮ್ಮ ಸರ್ಕಾರದ ಮಹತ್ವಾಂಕಾಕ್ಷಿ ಗ್ಯಾರಂಟಿ ಯೋಜನೆಗಳಿಗೆ ನೀಡಿದ ಭರವಸೆಯಂತೆ ಅನುದಾನ ಒದಗಿಸಿದಾಗ್ಯೂ ವಿತ್ತೀಯ ಕೊರತೆ ಹಾಗೂ ಜಿಎಸ್‌ಡಿಪಿಯ ಶೇಕಡವಾರು ಪ್ರಮಾಣದಲ್ಲಿ ಒಟ್ಟು ಹೊಣೆಗಾರಿಕೆಯನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002 ರಡಿ ನಿಗಧಿ ಪಡಿಸಿರುವ ಮಿತಿಯಲ್ಲಿ ನಿರ್ವಹಿಸಲಾಗುತ್ತಿದೆ.

ಮುಂದುವರೆದು ಪ್ರತಿ ಕಾಮಗಾರಿಗೆ ಇ-ಪ್ರೊಕ್ಯೂರ್ ಪೋರ್ಟಲ್‌ನಲ್ಲಿ ಟೆಂಡರ್ ದಾಸ್ತಾವೇಜಿನಲ್ಲಿ ನಿಗಧಿಪಡಿಸಿರುವ ತಾಂತ್ರಿಕ ಹಾಗು ವ್ಯವಹಾರಿಕ ಮಾನದಂಡಗಳನ್ನು ಅಳವಡಿಸಿ ಅರ್ಹತೆಹೊಂದಿದ ಗುತ್ತಿಗೆದಾರರಿಗೆ ಮಾತ್ರ ನಿಯಮಾನುಸಾರ ಗುತ್ತಿಗೆಯನ್ನು ವಹಿಸಲಾಗುತ್ತಿದೆ. ಸರ್ಕಾರವು ಗುತ್ತಿಗೆದಾರರ ಸಂಘದ ಮನವಿಯನ್ನು ಸ್ವೀಕೃತವಾಗಿದ್ದು, ಪ್ರಮುಖವಾಗಿ ಬಾಕಿ ಬಿಲ್ಲುಗಳ ಕುರಿತಂತೆ ಮೇಲೆ ವಿವರಿಸಿದಂತೆ ಕ್ರಮವಹಿಸಿದ್ದು, ಮುಂದೆಯೂ ಕೂಡ ಕಾಲ ಕಾಲಕ್ಕೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಹಾಗು ಸರ್ಕಾರದ ಇತರೆ ಆರ್ಥಿಕ ಭಾದ್ಯತೆಗಳನ್ನು ಆಧರಿಸಿ ತೀರುವಳಿಗೊಳಿಸಲು ಕ್ರಮವಹಿಸಲಾಗುತ್ತಿದೆ.

**ಕಡತ ಸಂಖ್ಯೆ: ಆಇ 82 ಆಕೋ-1/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ